# ನದಿಯ ಮೂಲ



ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿ

ಕಲೆ: ರಾಮಕೃಷ್ಣ ಸಿದ್ರಪಾಲ

ಬೆಳಗ್ಗೆಯಿಂದ ಸರಸ್ವತಿಯ ಮನೆ ಹುಡುಕುತ್ತಾ ಬೆಂಗಳೂರಿನ ಹೊರವಲಯದ ಕೊಳೆಗೇರಿಯಲ್ಲಿ ಅಲೆಯುತ್ತಿದ್ದ ರಾಜೀವನಿಗೆ, ತನ್ನೆದುರಿಗೆ ಸ್ವಲ್ಪ ದೂರದಲ್ಲಿ ದಿಢೀರನೆ ಏಳುತ್ತಿದ್ದ ದೂಳಿನ ಮೋಡವೂ ಅದರೊಳಗಿನಿಂದ ತನ್ನತ್ತಲೇ ಓಡಿ ಬರುತ್ತಿದ್ದ ಗೂಳಿಗಳ ಗುಂಪು ಅಸ್ಪಷ್ಟವಾಗಿ ಕಂಡಂತಾಗಿ, ಬಿಸಿಲಿನಲ್ಲಿ ಅಲೆದು ಜೋಮು ಹಿಡಿದಿದ್ದ ಮನವು ಕರೆಂಟ್ ಶಾಕ್ ಹೊಡೆಸಿಕೊಂಡಂತೆ ತಕ್ಷಣ ಎಚ್ಚರವಾಗಿ, ಎದುರಿಗೆ ಯಮನ ರೂಪದಲ್ಲಿ ವೇಗವಾಗಿ ಬರುತ್ತಿದ್ದ ಗೂಳಿಗಳನ್ನು ಈಗ ಸ್ಪಷ್ಟವಾಗಿ ಗುರುತಿಸಿ, ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು ಎಂಬಂತೆ, ತಕ್ಷಣ ಮಣ್ಣಿನ ರಸ್ತೆಯಿಂದ ಪಕ್ಕಕ್ಕೆ ನೆಗೆದನು. ಯಮನ ರೂಪದ ಗೂಳಿಗಳು ಆತನ ಪಕ್ಕದಿಂದಲೇ ವೇಗವಾಗಿ ಮುಂದಕ್ಕೆ ಸಾಗಿದವು. ಬದುಕಿದೆಯಾ ಬಡಜೀವವೇ ಎಂದು ರಾಜೀವನು ನಿಟ್ಟುಸಿರುಬಿಟ್ಟು, ಭಯಗೊಂಡಿದ್ದ ದೇಹವನ್ನು ನಿಯಂತ್ರಿಸುತ್ತಾ ವಾಸ್ತವಕ್ಕೆ ಬಂದಾಗ, ತಾನು ಪಕ್ಕಕ್ಕೆ ಲಾಂಗ್‌ಜಂಪ್ ಮಾಡಿದಾಗ ಲ್ಯಾಂಡ್ ಆಗಿದ್ದು ಸಗಣಿಯ ಕುಪ್ಪೆಯ ಮೇಲೆ ಎಂದು ಅರಿವಾಗಿತ್ತು. ಇವನ ವುಡ್‌ಲ್ಯಾಂಡ್ ಶೂ ಆಧಾರಿತ ಪಾದಗಳು ಸಗಣಿಯೊಳಗೆ ಪಚಕ್ ಎಂದು ತೂರಿದ್ದರಿಂದ, ಅಲ್ಲಿಂದ ಎಲ್ಲಾ ದಿಕ್ಕುಗಳಿಗೂ ಒಡೆದ ತೆಂಗಿನಕಾಯಂತೆ ಸಿಡಿದ ಸಗಣಿಯಿಂದ ಅವನ ರೇಮಂಡ್ಸ್ ಪ್ಯಾಂಟ್‌ಗೂ ಅಭಿಷೇಕವಾಗಿತ್ತು.

'ಥೂ ಕೊಳಕು ಜನ, ಈ ದರಿದ್ರ ಬಡಾವಣೆಯಲ್ಲಿ ಜನಗಳಿಗಿಂತ ದನಗಳೇ ಜಾಸ್ತಿ ಇದ್ದಂತಿವೆ. ಮನುಷ್ಯರೂ, ದನಗಳೂ ಒಟ್ಟಿಗೆ ಏರಿಯಾ ಎಲ್ಲಾ ಸಗಣಿ ಹಾಕಿವೆ' ಎಂದು ತನ್ನ ಕೋಪವನ್ನು ಯಾರ ಮೇಲೆ ತೋರಿಸಿಕೊಳ್ಳುವುದೆಂದು ಗೊತ್ತಾಗದೆ ಆ ಕಡೆ ಈ ಕಡೆ ನೋಡಿದ. ಅಲ್ಲೇ ಪಕ್ಕದಲ್ಲಿ ಹುಲ್ಲು ಮೇಯುತ್ತಿದ್ದ ಎಮ್ಮೆಯೊಂದು ತಲೆಯೆತ್ತಿ ಇವನನ್ನೊಮ್ಮೆ ನೋಡಿ, ನನಗೂ ಇದಕ್ಕೂ ಸಂಬಂಧವಿಲ್ಲ ಎನ್ನುವಂತೆ ಮೈಯನ್ನೆಲ್ಲಾ ಒಮ್ಮೆ ಅಲ್ಲಾಡಿಸಿ, ಮೈಮೇಲೆ ಕುಳಿತಿದ್ದ ಗುಂಗರಗಳನ್ನೆಲ್ಲಾ ಜಾಡಿಸಿಕೊಂಡು, ಮತ್ತೆ ಹುಲ್ಲು ಮೇಯುವುದನ್ನು ಮುಂದುವರೆಸಿತು. ಬೆಂಗಳೂರು ಬೆಳೆಯುತ್ತಾ ತನ್ನ ಸುತ್ತಮುತ್ತಲಿನ ಹಳ್ಳಿಗಳನ್ನೆಲ್ಲಾ ಬಡಿದು ಹೊಟ್ಟೆಯೊಳಗಾಕಿಕೊಂಡು ಜೀರ್ಣಿಸಿಕೊಂಡು, ತನ್ನ ಬೆಳವಣಿಗೆಯನ್ನು ಮುಂದುವರಿಸಿರುವುದಕ್ಕೆ ಸಾಕ್ಷಿಯಾಗಿ ಈ ಬಡಾವಣೆ ತಲೆಯೆತ್ತುತ್ತಿತ್ತು. ಹಿಂದೊಮ್ಮೆ ಸಮೃದ್ಧಿಯಾಗಿ ನಳನಳಿಸಿದ್ದ ತೋಟವೊಂದರ ಪಳೆಯುಳಿಕೆಯಂತಿರುವ ಒಂದೆರಡು ತೆಂಗು ಅಡಿಕೆ ಮರಗಳು, ಹಳ್ಳಿಯ ಪುಟ್ಟ ಕೆರೆ ಮತ್ತು ಅದರ ಅಂಚಿನಲ್ಲಿ ಕೆರೆಯನ್ನು ಒತ್ತುವರಿ ಮಾಡಿಕೊಂಡು ಕಟ್ಟುತ್ತಿರುವ ಮನೆಗಳೂ ಸೇರಿ, ಇದು ಬೆಂಗಳೂರಿನೊಳಗೆ ಇನ್ನೇನು ನೆಗೆಯಲು ಸಿದ್ಧವಾಗುತ್ತಿರುವ ಹಳ್ಳಿಯಂತೆ ಕಾಣುತ್ತಿತ್ತು.

ಶೂಗಳಿಗೆ ಮೆತ್ತಿದ್ದ ಸಗಣಿಯನ್ನು ಅಲ್ಲೇ ಹುಲ್ಲಿಗೆ ಒರೆಸಿಕೊಂಡು, ತನ್ನನ್ನು ಹೀಗೆ ಬಿಸಿಲಿನಲ್ಲಿ ಅಲೆಯುವಂತೆ ಮಾಡಿದ ಮನೆಕೆಲಸದಾಕೆ ಸರಸ್ವತಿಯ ಮೇಲೆ ಮತ್ತು ಅವಳು ತಮ್ಮ ಜಾತಿಯವಳೆಂಬ ವಿಶೇಷ ಅಭಿಮಾನದ ಕಾರಣದಿಂದ ಕೆಲಸಕ್ಕೆ ಸೇರಿಸಿಕೊಂಡ ಹೆಂಡತಿಯ ಬಗ್ಗೆಯೂ, ತನಗೆ ದಿಢೀರನೆ ಕರೆ ಮಾಡಿ ತಕ್ಷಣ ಮನೆಗೆಲಸದವಳ ಆಧಾರ್ ಕಾರ್ಡ್